1	2	3	4	5
11	ವಿದ್ಯಾನಗರ	400	2400	–ಅದೇ–
12	ಡೊಂಗರ ಗ್ರಾಸಿಯಾ ಬ್ಲಾಕ್	20	120	–ಅದೇ–
13	ಸೆಂಟ್ ಮೇರಿಸ್ ಹಿಂಭಾಗ	20	120	–ಅದೇ–
14	ಬೆಲವತ್ತ ಜನತಾ ಕಾಲೋನಿ	150	900	–ಅದೇ–
15	ದಲಿತ ಅಂಬೇಡ್ಕರ್ ಕಾಲೋನಿ	75	450	–ಅದೇ–
16	ಕೆಸರೆ ಚೆಲುವಾಡಿ ಕಾಲೋನಿ	180	1800	–ಅದೇ–
17	ರೆಹಮಾನ್ ಖಾನ್ ಬೀದಿ	20	120	–ಅದೇ–
18	ಬೆಲವತ್ತ, 2ನೇ ಹಂತ	45	270	–ಅದೇ–
19	ಕುಂಬಾರಕೊಪ್ಪಲು	75	450	–ಅದೇ–
20	ಗೋಕುಲಂ 2ನೇ ಹಂತ	50	300	–ಅದೇ–
21	ನಾಚನಹಳ್ಳಿ ಪಾಳ್ಯ	45	270	–ಅದೇ–
22	ಕಲ್ಪಯ್ಯನ ಜೋಪಡಿ	20	120	–ಅದೇ–
23	ಮೇದರ್ ಬೀದಿ	45	270	–ಅದೇ–
24	ದತ್ತನಗರ	45	270	–ಅದೇ–
25	ಗುಂಡೂರಾವ್ ನಗರ	20	120	–ಅದೇ–
26	ಗೋಪಿಕಾ ಗುಡಿಸಲು	45	270	–ಅದೇ–
27	ಮಲವಾಡಿ	45	270	–ಅದೇ–
28	ವಸಂತನಗರ	120	720	–ಅದೇ–
29	ಮುನೇಶ್ವರ ನಗರ	20	120	–ಅದೇ–
30	ಜಯನಗರ ಪಂಚವತಿ ರಸ್ತೆ	45	270	–ಅದೇ–
31	ಮೇಟಗಳ್ಳಿ ಎ.ಕೆ. ಕಾಲೋನಿ	126	756	–ಅದೇ–
	ಒಟ್ಟು	**3031**	**16406**	

526(676) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿವರ ನೀಡುವುದು;

ಆ) ಈ ಕಾಲೇಜುಗಳ ಪೈಕಿ ಸ್ವಂತ ಕಟ್ಟಡ ಹೊಂದಿರುವ ಕಾಲೇಜುಗಳು ಯಾವುವು; ಸ್ವಂತ ಕಟ್ಟಡ ಹೊಂದಿಲ್ಲದ ಕಾಲೇಜುಗಳು ಯಾವುವು;

ಇ) ಸ್ವಂತ ಕಟ್ಟಡ ಹೊಂದಿಲ್ಲದ ಕಾಲೇಜುಗಳಿಗೆ ಸ್ವಂತ ಕಟ್ಟಡ ಕಲ್ಪಿಸಲು ಸರ್ಕಾರ ಯಾವ ಕ್ರಮವಹಿಸಿದೆ?

ಶ್ರೀ ಡಿ.ಎಸ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):

ಅ) 1) ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು

2) ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು

3) ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಮೈಸೂರು

4) ಸರ್ಕಾರಿ ಮಹಿಳಾ ಕಾಲೇಜು, ವಿಜಯನಗರ, ಮೈಸೂರು

ಆ) ಮಹಾರಾಣಿ ಮಹಿಳಾ ಕಲಾ ಕಾಲೇಜು, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ ಇವುಗಳಿಗೆ ಸ್ವಂತ ಕಟ್ಟಡಗಳಿರುತ್ತದೆ.

ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಇರುವುದಿಲ್ಲ.

ಇ) ಕಾಲೇಜಿನ ಸ್ವಂತ ಕಟ್ಟಡ ಹೊಂದಿಲ್ಲದಿರುವ ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸಂಬಂಧಿಸಿದಂತೆ, ಸ್ವಂತ ಕಟ್ಟಡ ನಿರ್ಮಾಣಕ್ಕೆಂದು ಹುಟಗಳ್ಳಿಯ ಸರ್ವೆ ನಂ. 72ರಲ್ಲಿ 1 ಎಕರೆ ಜಮೀನನ್ನು ಪಡೆದಿದ್ದು, ಕಟ್ಟಡ ನಿರ್ಮಾಣಕ್ಕಾಗಿ ಲೋಕೋಪಯೋಗಿ ಇಲಾಖೆಗೆ ರೂ. 80.00 ಲಕ್ಷಗಳನ್ನು ಠೇವಣಿ ಮಾಡಲಾಗಿದೆ.

527(789) ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) :– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚನ್ನಪಟ್ಟಣ ತಾಲ್ಲೂಕು ಇಗ್ಗಲೂರು–ಕೋಡಂಬಳ್ಳಿ ಏತ ನೀರಾವರಿ ಯೋಜನೆ ಅನುಷ್ಠಾನ ಈಗ ಯಾವ ಹಂತದಲ್ಲಿದೆ;

ಆ) ಏತ ನೀರಾವರಿ ಯೋಜನೆಗೆ ಈವರೆವಿಗೂ ಖರ್ಚಾದ ಅನುದಾನವೆಷ್ಟು;

ಇ) ಏತ ನೀರಾವರಿ ಯೋಜನೆ ವಿಳಂಬವಾಗಲು ಕಾರಣವೇನು ಹಾಗೂ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು):

ಅ) ಈ ಯೋಜನೆಯು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಕಾರ್ಯ ಸಾಧುವೇ ಎಂಬುದರ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) ಮೇಲ್ಕಂಡ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲ್ಕಂಡ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

528(846) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?